

# ಬಾಂಗ್ಲಾ ವಿಮೋಚನೆಯ ಸ್ಮಾರಕ

## ಜಾತೀಯೊ ಸ್ಮೃತಿ ಶೌಧೋ

■ ಕೋಟೂರ್ ಸಂಪತ್

ಪೂರ್ವ/ಪಶ್ಚಿಮ ಪಾಕಿಸ್ತಾನದ ನಡುವಿನ 'ವಿಮೋಚನಾ ಯುದ್ಧ'ದಲ್ಲಿ ಮಡಿದ ಸಮರ ವೀರರ, ನಾಗರಿಕರ, ಹೋರಾಟಗಾರರ ಸ್ಮರಣಾರ್ಥ ಢಾಕಾದಲ್ಲಿ ನಿರ್ಮಾಣವಾದ ರಾಷ್ಟ್ರೀಯ ಸ್ಮಾರಕವೇ 'ಜಾತೀಯೊ ಸ್ಮೃತಿ ಶೌಧೋ'.

ಸುಮಾರು 175 ವರ್ಷ ಬ್ರಿಟಿಷ್ ಆಡಳಿತದ ಸಂಕೋಲೆಯಿಂದ ಭಾರತ 1947ರಲ್ಲಿ ಬಿಡುಗಡೆ ಹೊಂದಿ ಸ್ವತಂತ್ರ ರಾಷ್ಟ್ರವಾಯಿತು. 1945ರ ವಿಶ್ವ ಮಹಾಯುದ್ಧದ ನಂತರ, ಬ್ರಿಟಿಷ್ ಸರ್ಕಾರ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮನ್ನಣೆ ಕೊಡುವುದೆಂದು ತೀರ್ಮಾನಿಸಿ ಅಖಂಡ ಭಾರತಕ್ಕೆ ಸ್ವಾತಂತ್ರ್ಯ ನೀಡಲು ನಿರ್ಣಯಿಸಿತು.

ಆದರೆ ಈ ವಿಷಯದಲ್ಲಿ ಅನೇಕ ಸುತ್ತಿನ ಮಾತುಕತೆ ನಡೆದರೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ಗೂ ಮುಹಮ್ಮದ್ ಆಲಿ ಜಿನ್ನಾ ನೇತೃತ್ವದ ಮುಸ್ಲಿಮ್ ಲೀಗ್‌ಗೂ ಭಾರತ ಅಖಂಡವಾಗಿ ಸ್ವಾತಂತ್ರ್ಯ ಪಡೆಯುವ ವಿಚಾರದಲ್ಲಿ ಒಮ್ಮತ ಬರಲೇ ಇಲ್ಲ. ಜಿನ್ನಾ, ಭಾರತ ವಿಭಜನೆಯಾಗಿ ಪೂರ್ವ/ಪಶ್ಚಿಮ ಪಾಕಿಸ್ತಾನ ರಾಷ್ಟ್ರಗಳಾಗಬೇಕೆಂದು ಹಟ ಹಿಡಿದಾಗ ಸ್ವಾತಂತ್ರ್ಯ ನೀಡಬೇಕೆಂದು ನಿರ್ಣಯಿಸಿದ್ದ ಬ್ರಿಟಿಷ್ ಸರ್ಕಾರಕ್ಕೂ ತಲೆನೋವಾಗಿ ಪರಿಣಮಿಸಿತು.

1946ರಲ್ಲಿ ಜಿನ್ನಾ ಮುಸ್ಲಿಮ್ ರಾಷ್ಟ್ರ ರಚಿಸಲು ನೇರ ಹೋರಾಟಕ್ಕೆ ಕರೆ ನೀಡಿದಾಗ ಹಿಂಸಾಚಾರ ತಲೆಎತ್ತಿತು. ಭಾರತದಲ್ಲಿ ಅಂತರಯುದ್ಧ ಶುರುವಾಗುವ ಭೀತಿ ಹುಟ್ಟಿಕೊಂಡಿತು. ಇದನ್ನೆಲ್ಲ ಗಮನಿಸಿದ ಬ್ರಿಟಿಷ್ ಆಡಳಿತ 1947ರ ಜೂನ್‌ನಲ್ಲಿ ಅಖಂಡ ಭಾರತವನ್ನು ವಿಭಜನೆ ಮಾಡದೆ ಗತ್ಯಂತರವಿಲ್ಲವೆಂದು ತೀರ್ಮಾನಿಸಿ ಇಂಡಿಯಾ, ಪೂರ್ವ/ಪಶ್ಚಿಮ ಪಾಕಿಸ್ತಾನ ಎಂದು ಪ್ರತ್ಯೇಕ ರಾಷ್ಟ್ರಗಳ ಮಾಡಿ, 14–15 ಆಗಸ್ಟ್ 1947ರಲ್ಲಿ ಅಧಿಕೃತವಾಗಿ ಸ್ವಾತಂತ್ರ್ಯ ಘೋಷಣೆ ಮಾಡಿತು.

ಆಗಸ್ಟ್ 14, 1947ರಂದು ಸ್ವತಂತ್ರಗೊಂಡ ಎರಡು ಭಾಗದ ಪಾಕಿಸ್ತಾನಕ್ಕೆ ಮೊದಲ ಗವರ್ನರ್ ಜನರಲ್ ಆಗಿ ಮುಹಮ್ಮದ್ ಆಲಿ ಜಿನ್ನಾ ಅವಿರೋಧವಾಗಿ ಆಯ್ಕೆ ಆದರು. ಆಡಳಿತದ ಚುಕ್ಕಾಣಿ ಹಿಡಿದ ಘಟಾನುಘಟಿಗಳೆಲ್ಲ ಪಶ್ಚಿಮ ಪಾಕಿಸ್ತಾನದಲ್ಲಿ ಇದ್ದುಕೊಂಡು ಆಳ್ವಿಕೆ ನಡೆಸುತ್ತಿದ್ದರು. ಸಾಂಸ್ಕೃತಿಕವಾಗಿಯೂ, ಮಾತೃಭಾಷೆಯ ದೃಷ್ಟಿಯಿಂದಲೂ ತೀರಾ ಭಿನ್ನವಾಗಿದ್ದ ಪೂರ್ವ ಪಾಕಿಸ್ತಾನಕ್ಕೆ ಆಡಳಿತಗಾರರು ಮಲತಾಯಿ ಧೋರಣೆ ತೋರತೊಡಗಿದರು. 1950ರ ಹೊತ್ತಿಗೆ ಇವೆರಡು ಪಾಕಿಸ್ತಾನಗಳ ನಡುವೆ ಭಾರಿ ಕಂದಕವೇ ಏರ್ಪಟ್ಟಿತು.

ಕೇಂದ್ರೀಕೃತ ಪಶ್ಚಿಮ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ವಿರೋಧಿ ಆಡಳಿತ ಶುರುವಾಯಿತು. ಇದರಿಂದ ಪೂರ್ವ ಪಾಕಿಸ್ತಾನಕ್ಕೆ ಸಿಗಬೇಕಾದ ಗೌರವ, ಸವಲತ್ತು, ಅಭಿವೃದ್ಧಿ, ಧನ ಸಹಾಯ ಎಲ್ಲದರಲ್ಲೂ ಕೊರತೆಯಾಯಿತು. ಪೂರ್ವ ಪಾಕಿಸ್ತಾನದವರಿಗೆ ಯಾವುದೇ ರಾಜಕೀಯ ಹೇಳಿಕೆಗೆ ಅವಕಾಶವಿಲ್ಲದಂತಾಯಿತು.

ಆದರೆ 1970ರಲ್ಲಿ ನಡೆದ ಪಾಕಿಸ್ತಾನ ಸಾರ್ವತ್ರಿಕ ಚುನಾವಣೆಯಲ್ಲಿ ಪೂರ್ವ ಪಾಕಿಸ್ತಾನದ, ಶೇಕ್ ಮುಜಿಬುರ್ ರೆಹಮಾನ್ ನೇತೃತ್ವದ 'ಅವಾಮಿ ಲೀಗ್' ಪಕ್ಷ ಭಾರಿ ಬಹುಮತದಿಂದ ಗೆದ್ದು ಪ್ರಧಾನಮಂತ್ರಿ ಆಗಲೇಬೇಕಾದ ಪರಿಸ್ಥಿತಿ ಒದಗಿಬಿಟ್ಟಿತು. ಹೀಗಾಗುವುದು ಪಶ್ಚಿಮ ಪಾಕಿಸ್ತಾನದವರಿಗೆ ಬೇಡವಾಗಿತ್ತು. ಆಗಿನ ಪಾಕಿಸ್ತಾನದ ಅಧ್ಯಕ್ಷ ಯಾಹ್ಯಾ ಖಾನ್ ನೇತೃತ್ವದಲ್ಲಿ 1971 ಮಾರ್ಚ್ 26ರಂದು 'ಆಪರೇಷನ್ ಸರ್ಚ್‌ಲೈಟ್' ಹೆಸರಿನಡಿ ಪೂರ್ವ ಪಾಕಿಸ್ತಾನದ ಮೇಲೆ ದಾಳಿ ಶುರುಮಾಡಲಾಗಿ ದಶಲಕ್ಷಕ್ಕೂ ಮೀರಿದ ವಲಸಿಗರು ಅಸ್ಸಾಂ, ತ್ರಿಪುರಾ, ಪಶ್ಚಿಮ ಬಂಗಾಳಕ್ಕೆ ನುಗ್ಗಿ ಬಂದರು. ಭಾರತ ಈ ವಲಸಿಗರಿಗೆ ಸಹಾಯಹಸ್ತ ನೀಡಿದ್ದಲ್ಲದೆ ತನ್ನ ಸೇನೆಯನ್ನು ಪೂರ್ವ ಪಾಕಿಸ್ತಾನದ 'ಮುಕ್ತಿ ಬಾಹಿನಿ' ಸ್ವಾತಂತ್ರ್ಯ ಹೋರಾಟಗಾರರ ಸಹಾಯಕ್ಕೆ ನೀಡಿ 14 ದಿನಗಳ ಯುದ್ಧದಲ್ಲಿ ಪೂರ್ವ ಪಾಕಿಸ್ತಾನಕ್ಕೆ ಗೆಲುವು ತಂದುಕೊಟ್ಟಿತು.

ಮಾರ್ಚ್ 26, 1971ರಿಂದ ಆರಂಭವಾದ ಪೂರ್ವ ಪಾಕಿಸ್ತಾನ 'ವಿಮೋಚನಾ ಯುದ್ಧ' ಡಿಸೆಂಬರ್ 16, 1971ರಲ್ಲಿ ಕೊನೆಗೊಂಡು 'ಬಾಂಗ್ಲಾದೇಶ್' ಉದಯವಾಯಿತು. ಈ ವಿಮೋಚನಾ ಯುದ್ಧದಲ್ಲಿ ಮಡಿದ ಸಮರ ವೀರರ, ನಾಗರಿಕರ, ಅನಧಿಕೃತ ಹೋರಾಟಗಾರರ ಸ್ಮರಣಾರ್ಥ 'ಜಾತೀಯೊ ಸ್ಮೃತಿ ಶೌಧೋ' ಹೆಸರಿನ ರಾಷ್ಟ್ರೀಯ ಸ್ಮಾರಕ ರಾಜಧಾನಿ ಢಾಕಾದಲ್ಲಿ ನಿರ್ಮಾಣವಾಗಿ 1982ರಲ್ಲಿ ಲೋಕಾರ್ಪಣೆ ಆಯಿತು. ಇದರ ವಿನ್ಯಾಸಕಾರ ಸಯ್ಯದ ಮೈನುಲ್ ಹುಸೇನ್. ಬಾಂಗ್ಲಾದೇಶ ಸ್ವಾತಂತ್ರ್ಯ ಪಡೆದ ದಿನ ಮಾರ್ಚ್ 26ರಂದು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕರು ಬಂದು ಗೌರವ ಸೂಚಿಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in